ಹೇಳಿದರು. ಆದರೆ ಇದು ಆಗಿರತಕ್ಕದ್ದು ಗೂಂಡಾಗಿರಿಯಲ್ಲವೆ? ಅದೇ ಜಲ್ಲೆಯಲ್ಲಿ ಬೇರೆ ಒಂದು ದೂರು ಬಂದರೆ ಒಂದಲ್ಲ ಎರಡಲ್ಲ ಮುರ್ನಾಲ್ಕು ಎಫ್‌ಐಆರ್‌ಗಳನ್ನು ಹಾಕಿಸತಕ್ಕ ಕೆಲಸ ನಡೆಯುತ್ತದೆ. ಇಲ್ಲಿ ರಾಜಾರೋಷವಾಗಿ ನಡೆದಂತಹ ಚುನಾವಣೆಯ ಬಗ್ಗೆ ಕ್ರಮ ತೆಗೆದುಕೊಳ್ಳದೆ ಡಿಲೇ ಟ್ಯಾಕ್ಟೀಸ್ ಬೇಕಾಗಿಯೇ ಮಾಡತಕ್ಕದ್ದು ಇಂತಹ ವ್ಯವಸ್ಥೆ, ನಿನ್ನೆ ನಾನು ಗೃಹಸಚಿವರಾದ ಮಾನ್ಯ ಸಿಂಧ್ಯಾರವರ ಹತ್ತಿರ ಮಾತನಾಡಿದ್ದೇನೆ. ಒಂದು ಸಣ್ಣ ವಿಚಾರಕ್ಕೆ ಮುರ್ನಾಲ್ಕು ಎಫಐಆರಗಳನ್ನು ಹಾಕಿಸತಕ್ಕ ಕೆಲಸವನ್ನು ಮಾಡಿಸಿದ್ದಾರೆ. ಒಬ್ಬರಿಗೊಂದು ಒಬ್ಬರಿಗೊಂದು ನ್ಯಾಯ ನಡೆಯತಕ್ಕದ್ದು ಆದರೆ ಈ ಜಿಲ್ಲೆಯಲ್ಲಿ ಬೇರೆ ಶಾಸಕರು ಬೇರೆ ಪಕ್ಷದವರು ಯಾವರೀತಿ ನಡೆದುಕೊಳ್ಳಬೇಕಾಗುತ್ತದೆ? ಇದು ಸರಿಯಲ್ಲ, ಇದನ್ನು ನಾವು ತೀವ್ರವಾಗಿ ಖಂಡಿಸಿ ಪ್ರತಿಭಟನೆ ಮಾಡಿ ಸಭಾತ್ಯಾಗವನ್ನು ಮಾಡುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ :.ಮಾನ್ಯ ಉಪಾಧ್ಯಕ್ಷರೆ...

ಉಪಾಧ್ಯಕ್ಷರೆ : ನಿಮ್ಮ ಪಕ್ಷದ ನಾಯಕರು ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ, ನೀವು ಬೇರೆ ತೀರ್ಮಾನ ತೆಗೆದುಕೊಳ್ಳುತ್ತೀರೋ?

ಶ್ರೀ ಎ. ಟಿ. ರಾಮಸ್ವಾಮಿ : ಇಲ್ಲ. ಯಾರಾದರೂ ಕಾನೂನನ್ನು ಕೈಗೆ ತೆಗೆದುಕೊಂಡರೆ ಯಾವುದೇ ಸರ್ಕಾರ ಸುಮ್ಮನೆ ಕೂಡುವುದಿಲ್ಲ.

ಉಪಾಧ್ಯಕ್ಷರು : ನಿಮ್ಮ ನಾಯಕರು ಈಗ ಒಂದು ತೀರ್ಮಾನ ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಎ.ಟಿ. ರಾಮಸ್ವಾಮಿ : ಆಯಿತು, ನಾವು ಒಂದು ತೀರ್ಮಾನ ತೆಗೆದುಕೊಳ್ಳುತ್ತೇನೆ. ಇದು ಯಾವ ಸರ್ಕಾರ? ಈ ಸರ್ಕಾರಕ್ಕೆ ನಾವು ಏನೆಂದು ಹೇಳಬೇಕು? ಇದನ್ನು ಷಂಡ ಸರ್ಕಾರವೆಂದು ಹೇಳಬೇಕೆ? ಎಕೆ ಕೈ ಕಟ್ಟಿಕೊಂಡು ಕುಳಿತುಕೊಂಡಿದ್ದೀರಿ? ನಾಮಪತ್ರಗಳನ್ನು ಹಾಡುಹಗಲೇ ಹೊತ್ತುಕೊಂಡು ಹೋದರೂ ಕೂಡ ಅದು ಪೋಲೀಸಿನವರ ಮುಂದೆ ಅಧಿಕಾರಿಗಳ ಮುಂದೆ ಸುಮ್ಮನೆ ಹೇಳಬೇಕು? ಇದನ್ನು ಷಂಡ ಸರ್ಕಾರವೆಂದು ಹೇಳಿ ನಾನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಎ.ಟಿ. ರಾಮಸ್ವಾರಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ಬಿ. ಶಿವರಾಮ್ : ಎಫಐಆರ್ ಕಾಪಿ ಬೇಕೇ ನಿಮಗೆ ಕಳುಹಿಸಿ ಕೊಡುತ್ತೇನೆ. ಕಂಪ್ಲೆಂಟ್ ಎಂಡಾರ್ಸಮೆಂಟ್ ಕಾಪಿ ತಹಶೀಲ್ದಾರರವರು ಕೊಟ್ಟಿರತಕ್ಕದ್ದು ಅದನ್ನು ಕೊಡುತ್ತಿದ್ದೇನೆ. ಇದನ್ನೆಲ್ಲ ತೆಗೆದುಕೊಂಡು ಪರಿಶೀಲನೆ ಮಾಡಬಹುದು ತಮ್ಮ ಮುಖಾಂತರ ಕಳುಹಿಸಿ ಕೊಡುತ್ತಿದ್ದೇನೆ. ಏನು ಮಾಹಿತಿ ಎನ್ನುವುದನ್ನು ಪೂರ್ತಿ ನೋಡಿ. ಇದನ್ನು ಹೊರತುಪಡಿಸಿ, ಲಿಖಿತವಾಗಿರತಕ್ಕದ್ದು ಹೊರತುಪಡಿಸಿ ಒಂದೇ ಒಂದು ಪದವನ್ನು ನಾನು ಬಳಸಿಲ್ಲ. ಹೋಮ್ ಮಿನಿಸ್ಟರ್ ಬೇಕಾದರೆ ಇದನ್ನು ಎಕ್ಸಾಮಿನ್ ಮಾಡಿಸಬಹುದು. ರೆವಿನ್ಯೂ ಮಿನಿಸ್ಟರ್ ಎಕ್ಸಾಮಿನ್ ಮಾಡಿಸಬಹುದು. ಎಂಡಾರ್ಸ್‌ಮೆಂಟ್ ಕಾಪಿ ಮತ್ತು ಎಫಐಆರ್ ಕಾಪಿ ಇದನ್ನು ಆಧರಿಸಿ ಮಾತನಾಡಿರತಕ್ಕದ್ದು ಸರ್ಕಾರ ವಿಫಲವಾಗಿದೆಯೆಂದು

ಇದಕ್ಕಿಂತ ಇನ್ನೇನು ಹೇಳಬೇಕು. ಒಂದು ಜಿಲ್ಲೆಗೆ ಒಂದು ರೀತಿ ಇನ್ನೊಂದು ಜಿಲ್ಲೆಗೆ ಒಂದು ರೀತಿ. ಅದೇ ಜಿಲ್ಲೆಯಲ್ಲಿ ಒಂದು ಕ್ಷೇತ್ರಕ್ಕೆ ಒಂದು ರೀತಿ ಇನ್ನೊಂದು ಕ್ಷೇತ್ರಕ್ಕೆ ಒಂದು ರೀತಿ. ಈ ರೀತಿ ಕೃತ್ಯಗಳೆಲ್ಲ ನಡೆಯುತ್ತಿದ್ದರೆ ನಾವು ಶಾಸಕರುಗಳಾಗಿ ಇರುವುದಕ್ಕೆ ಆಗುತ್ತದೆಯೇ? ನಾವು ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆಯೇ? ಬೇರೆ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳನ್ನು ಮಾಡಿದಾಗ ಬೇರೆ ಪಕ್ಷದಶಾಸಕರು ಇದ್ದರೆ ಅವರ ಹೆಸರುಗಳನ್ನು ಆಹ್ವಾನಪತ್ರಿಕೆಗಳಲ್ಲಿ ಹಾಕಿಸುವುದಿಲ್ಲ. ಅವರ ಬಗ್ಗೆ ಬೇರೆ ರೀತಿಯಲ್ಲಿ ಟೀಕೆಗಳನ್ನು ಮಾಡತಕ್ಕದ್ದನ್ನು ಮಾಡುತ್ತಾರೆ. ಇದನ್ನು ಸರ್ಕಾರ ತೀವ್ರವಾಗಿ ಪರಗಣಿಸದೇ ಹೋದರೆ ನಮ್ಮಗಳಿಗೆ ರಕ್ಷಣೆ ಸಿಗುವುದಿಲ್ಲವೆಂದು ನಾನೂ ಸಹ ಸಭಾತ್ಯಾಗವನ್ನು ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಬಿ. ಶಿವರಾಮರವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಈ ವಿಷಯದ ಬಗ್ಗೆ ನಾಳೆ ಸಂಬಂಧಪಟ್ಟ ಸಚಿವರು ಉತ್ತರ ಕೊಡಬೇಕು.

ಶ್ರೀ ವೈಜನಾಥ್ ಪಾಟೀಲರು : ಅದೆರ ಬಗ್ಗೆ ರಿಪೋರ್ಟ್ ತರಿಸಿಕೊಂಡು ನಾನುಉತ್ತರ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ಉಪಾಧ್ಯಕ್ಷರು : ಈಗ ಶೂನ್ಯವೇಳೆ ಮುಗಿಯಿತು. ಇನ್ನು ಗಮನ ಸೆಳೆಯುವ ಸೂಚನೆಗಳು.

ಸ್ನಾತಕೋತ್ತರ ಪದವಿಗಳಾದ ಎಂ.ಡಿ. ಎಂ.ಎಸ್. ಹಾಗೂ ಡಿಪ್ಲೋಮ ಕೋರ್ಸುಗಳ ಪ್ರವೇಶದಲ್ಲಿ ಆಕ್ರಮ.

ಶ್ರೀ ಎ. ರಾಮದಾಸ್ : ಸನ್ಮಾನ್ಯ ಉಪಾಧ್ಯಕ್ಷರೆ, ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಗಳಾದ ಎಂ.ಡಿ. ಎಂ.ಎಸ್. ಹಾಗೂ ಡಿಪ್ಲೋಮಾ ಇವುಗಳ ಪ್ರವೇಶದಲ್ಲಿ ಅಕ್ರಮವಾಗಿರುವ ಬಗ್ಗೆ ಹಾಗೂ ಈ ಅಕ್ರಮದಿಂದ ಸರ್ಕಾರದ ಎಲ್ಲ ಹಂತಗಳಲ್ಲೂ ಕೂಡ ಕೋಟ್ಯಾಂತರ ರೂಪಾಯಿಗಳ ಹಸ್ತಾಂತರ ಆಗಿರುವುದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.

+ಶ್ರೀ ಎ. ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯಮಂತ್ರಿ) : ಸನ್ಮಾನ್ಯ ಉಪಾಧ್ಯಕ್ಷರೇ, ಗೌರವಾನ್ವಿತ ಸದಸ್ಯರು ಏನು ಆಪಾದನೆ ಮಾಡಿದ್ದಾರೆ, ಅದು ಸುಳ್ಳು ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅವರು ಬೇಕಾದರೆ ನಿರ್ದಿಷ್ಟವಾದ ಯಾವುದಾದರೂ ಒಂದು ಉದಾಹರಣೆಯನ್ನು ಹೇಳಲಿ.

ಉಪಾಧ್ಯಕ್ಷರು : ಮೊದಲು ನೀವು ಸ್ಟೇಟಮೆಂಟ್ ಮಾಡಿ.

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ನನ್ನ ಹೇಳಿಕೆಯನ್ನು ಓದಲು ತಮ್ಮ ಅಪ್ಪಣೆ ಕೇಳುತ್ತೇನೆ.

1994-95ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ಸೀಟುಗಳು, ಸರ್ಕಾರಿ